# ಓದುಗರ ಸ್ಪಂದನ

## ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ.

**ಮ**ನುಷ್ಯನಿಗೆ ಹುಟ್ಟು ಸಾವುಗಳ ನಡುವಿನ ಅಂತರವಾದ ಆಯುಷ್ಯ ಅತಿ ಅಮೂಲ್ಯ, ಅತ್ಯಲ್ಪ ಕೂಡ. ಆದರೂ ನಾವು ಈ ಆಯುಷ್ಯದ ಸಮಯದಲ್ಲಿ ಮಹತ್ತರವಾದುದನ್ನು ಸಾಧಿಸುವುದು ಅತ್ಯಾವಶ್ಯಕ. ಈ ಸಾಧನೆಗಳಲ್ಲಿ ಮಕ್ಕಳ ಜೀವನವನ್ನು ಸರಿಯಾಗಿ ರೂಪಿಸುವುದೂ ಒಂದು. ನಮ್ಮ ಮಕ್ಕಳ ಜೀವನವನ್ನು ಸುಂದರ ಮೂರ್ತಿಯಾಗಿ ಪರಿವರ್ತಿಸಲು ನಮ್ಮ ಜವಾಬ್ದಾರಿ ಅತಿಮುಖ್ಯ. ನಮಗೆ ಮಕ್ಕಳು ಹೊರೆಯಾಗುತ್ತಿದ್ದಾರೆ ಎಂದು ತಿಳಿದು ಬೇರೆಡೆಗೆ ವಿದ್ಯಾಭ್ಯಾಸಕ್ಕಾಗಿಯಾಗಲೀ, ಬೇರೆ ಯಾವುದಕ್ಕಾಗಿ ಆಗಲಿ ಕಳುಹಿಸಿ ನಿಶ್ಚಿಂತೆಯಿಂದ ಇರುವ ಪಾಲಕರು ಬಹಳ ಜನರಿದ್ದಾರೆ. ನಾವು ಗಳಿಸಿರುವ ಘನತೆ, ಗೌರವಗಳನ್ನು ಈ ಸಮಾಜದಲ್ಲಿ ಹಾಗೆಯೇ ಶಾಶ್ವತವಾಗಿ ಉಳಿಸಿ ಮುಂದುವರೆಸಿಕೊಂಡು ಹೋಗುವುದು ನಮ್ಮ ಸ್ವಂತ ಮಕ್ಕಳಿಂದ ಮಾತ್ರ ಸಾಧ್ಯ. ಮಕ್ಕಳು ಸರಿಯಾದ ದಾರಿಯಲ್ಲಿ ನಡೆದುಹೋಗಲು ನಮ್ಮ ಜವಾಬ್ದಾರಿ ಈಗಿನಂತೆ ಹಾಳಾಗುತ್ತಿರುವ ಈ ಪವಿತ್ರ ಹಿಂದುಸ್ಥಾನಕ್ಕೆ ಅತಿ ಅವಶ್ಯಕವಾದುದು. ಅಲಕ್ಷಿಸದೇ ತಮ್ಮ ಆತ್ಮವನ್ನು ತಾವೇ ಶೋಧಿಸುವ ಸದವಕಾಶ ಈಗ ಒದಗಿ ಬಂದಿದೆ. ಎಲ್ಲರೂ ಎಚ್ಚರಗೊಳ್ಳುತ್ತಾರೆಂದು ಆಶಿಸುವೆ. ಧನ್ಯವಾದಗಳು. —*ಡಾ. ಗಂಗಾಧರ್ ನಾಯಕ್, ಶಿರಾಳಕೊಪ್ಪ.*

**ಮ**ಕ್ಕಳಿಗೆ ಪ್ರೀತಿಯನ್ನು ತೋರುವುದು ಸರಿ. ಆದರೆ ಎಷ್ಟು ಎಂಬುದೇ ಪ್ರಶ್ನೆ! ಹಾಗೆ ಪ್ರೀತಿ ಅತೀ ಆದರೆ ಮುಂದೆ ಮಕ್ಕಳ ಭವಿಷ್ಯ? ತಮ್ಮ ತಮ್ಮ ಸೀಮಿತ ವಲಯದಿಂದ ಹೊರಬಂದು ಮಕ್ಕಳನ್ನು ಕಾಣಲು ಪ್ರಯತ್ನಿಸೋದು ಉತ್ತಮ. ಮಕ್ಕಳ ಕೈಯಲ್ಲಿ ಆಗೋ ಕೆಲಸಗಳನ್ನು ಅವರ ಕೈಯಲ್ಲೇ ಸರಿಯಾದ ಮಾರ್ಗದರ್ಶನ ನೀಡಿ ಮಾಡಿಸುವಂತಹದ್ದು ಉತ್ತಮವೆ. ಇಲ್ಲವಾದಲ್ಲಿ ಅವರುಗಳು ಸೋಮಾರಿಗಳಾಗುವುದು ಖಚಿತ. ಕೆಲವೊಂದು ವಿಷಯಗಳಲ್ಲಿ ಪರಾವಲಂಬಿಗಳಾಗದಂತೆ ನೋಡಿಕೊಳ್ಳುವುದು ಆವಶ್ಯಕ.

ಮಕ್ಕಳು ತಪ್ಪುಗಳನ್ನು ಮಾಡುವುದು ಸಾಮಾನ್ಯ. ಇಲ್ಲಿ ಮುಖ್ಯವಾಗಿ ತಪ್ಪನ್ನೇ ಪ್ರಮುಖವಾದ ಅಂಶ ಎಂದು ತಿಳಿದು ಶಿಕ್ಷಿಸುವುದು ಎಷ್ಟು ಸರಿ? ಅದರ ಬದಲು ಎಲ್ಲಿ ತಪ್ಪು ಆಯಿತು, ಆಗುತ್ತದೆ, ಆಗಲಿದೆ, ಆಗುವಂತಹದ್ದು ಅಂತೆಲ್ಲ ವಿಚಾರ ಮಾಡಿ, ತಿಳಿಸಿ ಸರಿಯಾದ ಮಾರ್ಗದರ್ಶನ ನೀಡುವುದು ಸೂಕ್ತವಲ್ಲವೇ? ಅದರಂತೆಯೇ ಒಂದು ಕಾರ್ಯದ ಸಾಧಕ-ಬಾಧಕಗಳನ್ನು ತಿಳಿಸುವುದು ಮುಖ್ಯವಾಗುತ್ತೆ.

ಮಕ್ಕಳಲ್ಲಿ ಒಳ್ಳೆಯ ವ್ಯಕ್ತಿತ್ವ ನಿರ್ಮಾಣವಾಗಲು ಪ್ರಮುಖವಾಗಿ ಮನೆಯ ಪರಿಸರ ಕಾರಣ. ಒಳ್ಳೆಯ ಪರಿಸರ ಸಿಕ್ಕಾಗ ಮಕ್ಕಳ ಜೀವನವು ಹಚ್ಚ ಹಸಿರಿನಿಂದ ತುಂಬಿಕೊಂಡಿರುತ್ತದೆ. ಮಲ್ಲಿಗೆ ಗಿಡದ ಸಸಿಯನ್ನು ನೆಟ್ಟು ಸರಿಯಾಗಿ ಬೆಳೆಸಿದಲ್ಲಿ ಅದು ಬೆಳೆದು ಮಲ್ಲಿಗೆ ಹೂವನ್ನೇ ಬಿಟ್ಟು ಸುತ್ತಣ ಪರಿಸರವನ್ನು ಕೂಡಾ ಆಹ್ಲಾದಕರವಾಗಿ ಇರಿಸುತ್ತದಲ್ಲವೇ? ಹಾಗೆಯೇ ತಂದೆತಾಯಿಗಳು ಕೂಡ ಮಕ್ಕಳ ಮನದಾಳದಲ್ಲಿ ಯಾವ ಅಂಶಗಳನ್ನು ಬಿತ್ತುವರೋ ಅದೇ ಪ್ರತಿಫಲ ಪಡೆಯುವರು.

—*ಹಾಸನ್ ಮಂಜು, ಮೈಸೂರು.*

**ಮನೆಯೇ ಬೇರೆ ಎಲ್ಲ ಸಂಸ್ಥೆಗಳ ತರಬೇತಿ ಕೇಂದ್ರ.**

—*ಇ.ಹೆಚ್. ಚಾಪಿನ್.*

“ಮಕ್ಕಳ ಇಸ್ಕೂಲ್ ಮನೇಲಲ್ವೇ?” ಎಂಬ ಕೈಲಾಸಂ ಅವರ ಮಾತು, “ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ” ಎಂಬ ಹೇಳಿಕೆ—ಇವು ಮಕ್ಕಳು ಶಾಲೆಯಲ್ಲಿ ಕಲಿಯುವುದಕ್ಕಿಂತ ಹೆಚ್ಚಾಗಿ ಮನೆಯಲ್ಲಿಯೇ ಕಲಿಯುತ್ತಾರೆ ಎಂಬ ಅಂಶವನ್ನು ಸಮರ್ಥಿಸುತ್ತವೆ. ಮಕ್ಕಳು ಶಾಲಾಕಾಲೇಜುಗಳಲ್ಲಿ ಕಲಿಯುವುದು ಸಾಂಪ್ರದಾಯಿಕ ಶಿಕ್ಷಣ, ಮನೆಯಲ್ಲಿ ಕಲಿಯುವುದು ಜೀವನ ಶಿಕ್ಷಣ. ಮನೆಯಲ್ಲಿ ಹೆಚ್ಚುಕಾಲ ಇರುವ ಮಕ್ಕಳು ತಮ್ಮ ಹಿರಿಯರ ನಡೆನುಡಿಗಳನ್ನು ಗಮನಿಸುವುದು ಮತ್ತು ಅವನ್ನೇ ಅನುಕರಿಸುವುದು ಸಹಜ. ಹಾಗಾಗಿ ತಂದೆತಾಯಿಗಳಲ್ಲಿ ಒಳ್ಳೆಯ ಅಭ್ಯಾಸಗಳು ಇದ್ದರೆ, ಮಕ್ಕಳೂ ಒಳ್ಳೆಯ ಅಭ್ಯಾಸಗಳನ್ನು ಕಲಿಯುತ್ತಾರೆ. ಕೆಟ್ಟ ಅಭ್ಯಾಸಗಳಿದ್ದರೆ ಕೆಟ್ಟ ಅಭ್ಯಾಸಗಳನ್ನು ಕಲಿಯುತ್ತಾರೆ. ಆದ್ದರಿಂದ ತಂದೆ ತಾಯಿಗಳು ಮಕ್ಕಳಿಂದ ಯಾವ ಒಳ್ಳೆಯ ಅಭ್ಯಾಸಗಳನ್ನು ನಿರೀಕ್ಷಿಸುತ್ತಾರೆಯೋ, ಅವುಗಳನ್ನು ತಾವು ಮೊದಲು ಆಚರಿಸಬೇಕಾಗುತ್ತದೆ. ಏಕೆಂದರೆ ಮಕ್ಕಳ ಮೇಲೆ ತಂದೆತಾಯಿಗಳ ಪ್ರಭಾವ ಬೀಳುವುದು ಅನಿವಾರ್ಯ.

ಮಕ್ಕಳಿಗೆ ಶಿಕ್ಷಣ ಕೊಡುವಾಗ ಅವರ ಆಸಕ್ತಿಯನ್ನು ಗಮನಿಸುತ್ತಿದ್ದು, ಅದಕ್ಕೆ ಪೂರಕವಾದ ಶಿಕ್ಷಣವನ್ನು ಕೊಡಲು ಪ್ರಯತ್ನಿಸಬೇಕು. ಒಂದು ನಿರ್ದಿಷ್ಟ ವಯಸ್ಸಿನವರೆಗೆ ಅವರನ್ನು ಆ ದಾರಿಯಲ್ಲಿ ನಡೆಯುವಂತೆ ಪ್ರೋತ್ಸಾಹಿಸಬೇಕು. ಅವರಿಗೆ ಕಲೆಯಲ್ಲಿಯೋ, ಸಾಹಿತ್ಯದಲ್ಲಿಯೋ ಆಸಕ್ತಿ ಇದ್ದರೆ, ತಂದೆತಾಯಿಗಳು “ನೀನು ಡಾಕ್ಟರ್ ಅಥವಾ ಇಂಜಿನಿಯರ್” ಆಗಬೇಕೆಂದು ಒತ್ತಾಯಿಸಬಾರದು. ಅದರಿಂದ ಭವಿಷ್ಯವನ್ನು ರೂಪಿಸಬೇಕಾದ ತಂದೆತಾಯಿಗಳೇ ಅವರ ಜೀವನವನ್ನು ಹಾಳುಮಾಡಿದಂತಾಗುತ್ತದೆ.

ಪ್ರೌಢ ವಯಸ್ಸಿಗೆ ಬಂದ ಮಕ್ಕಳನ್ನು ಸ್ನೇಹಿತರಂತೆ ಕಂಡು

ಅವರ ಅಭಿಪ್ರಾಯಗಳಿಗೂ ಬೆಲೆ ಕೊಡಬೇಕು. ಅವರ ಆಸೆ ಆಕಾಂಕ್ಷೆಗಳು ಸಮರ್ಪಕವಾಗಿದ್ದರೆ ಅವನ್ನು ಈಡೇರಿಸಲು ಪ್ರಯತ್ನಿಸಬೇಕು. ಇಂದು ಮಕ್ಕಳು ಹಿರಿಯರಿಗೆ ಗೌರವ ಕೊಡುತ್ತಿಲ್ಲ ಎಂಬ ಆಕ್ಷೇಪವು ಸಾಮಾನ್ಯವಾಗಿದೆ. ಆದರೆ ಹಿರಿಯರು ತಮ್ಮ ನಡೆನುಡಿಯಲ್ಲಿ ಆದರ್ಶಪ್ರಾಯರಾಗಿದ್ದರೆ, ಕಿರಿಯರ ಅಭಿಪ್ರಾಯಗಳನ್ನು ಗೌರವಿಸಿದರೆ, ಮಕ್ಕಳಿಗೆ ಅವರಲ್ಲಿ ಗೌರವ ಮೂಡುತ್ತದೆ. ಹಾಗಾದಾಗ ಮಕ್ಕಳು ತಾವಾಗಿಯೇ ಅವರ ಪ್ರಭಾವಕ್ಕೆ ಒಳಗಾಗುತ್ತಾರೆ. ಹೀಗೆ ಬೆಳೆದ ಮಕ್ಕಳು ತಂದೆತಾಯಿಗಳಿಂದ ಎಷ್ಟೇ ದೂರದಲ್ಲಿದ್ದರೂ ಅವರ ಪ್ರಭಾವ ಇದ್ದೇ ಇರುತ್ತದೆ. ಇಂತಹ ಮಕ್ಕಳು ಬಹುಮಟ್ಟಿಗೆ ದಾರಿ ತಪ್ಪುವ ಸಂಭವ ಕಡಿಮೆ. ಹೀಗೆ ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಾಯಿತಂದೆಗಳ ಪಾತ್ರವು ಮಹತ್ತರವಾದುದು ಎಂದು ಹೇಳಬಹುದು. "ತಂದೆಯಂತೆ ಮಗ, ಗುರುವಿನಂತೆ ಶಿಷ್ಯ" "ತಾಯಿಯಂತೆ ಮಗಳು ನೂಲಿನಂತೆ ಸೀರೆ" ಎಂಬ ಮಾತುಗಳೂ ಸಹ ಇದನ್ನೇ ಪುಷ್ಟೀಕರಿಸುತ್ತವೆ.

—ಕೆ.ಜಿ. ವಿರೂಪಾಕ್ಷಪ್ಪ, ಬೆಂಗಳೂರು.

**ಮಾ**ತೃದೇವೋ ಭವ, ಪಿತೃದೇವೋ ಭವ ಎಂಬುದು ಪ್ರಾಜ್ಞರು ಹೇಳುತ್ತಾ ಬಂದಿರುವ ಮಹಾವಾಕ್ಯ. ಇಂತಹ ಗೌರವಕ್ಕೆ ಪಾತ್ರರಾಗಬೇಕಾದರೆ ಅವರು ತಮ್ಮ ಮಕ್ಕಳಿಗೆ ಉತ್ತಮ ಮಾರ್ಗದರ್ಶಕರಾಗಬೇಕು. ಶಿಕ್ಷಣವು ಶಿಶುವಿಗೆ ತಾಯ ಗರ್ಭದಲ್ಲಿರುವಾಗಲೇ ಆರಂಭವಾಗುವುದು. ತಾಯಿಯ ಚಿಂತನೆ, ಅಭೀಪ್ಸೆ, ಕಲ್ಪನೆ, ಧಾರ್ಮಿಕ ದೃಷ್ಟಿ ಇವೆಲ್ಲವೂ ಆಕೆ ಮಗುವಿಗೆ ಕೊಡುವ ಕೊಡುಗೆ. ಮಕ್ಕಳಿಗೆ ಆಹಾರ ಒದಗಿಸಿ ಶುಭ್ರ ಬಟ್ಟೆ ಧರಿಸಿ ತೂಕದ ಸ್ಕೂಲ್ ಬ್ಯಾಗನ್ನು ಹೊರಿಸಿ ಕಳಿಸಿದರೆ ತಮ್ಮ ಜವಾಬ್ದಾರಿ ಮುಗಿಯಿತೆಂದು ತಿಳಿಯುವುದು ಸರಿಯಲ್ಲ. ತಾಯಿತಂದೆಯರು ಶೀಲವಂತರೂ, ಸತ್ಯಸಂಧರೂ ಆಗಿದ್ದಲ್ಲಿ, ಧೈರ್ಯ, ನಿಃಸ್ವಾರ್ಥದೃಷ್ಟಿ, ಸಹನೆ, ದಕ್ಷತೆ, ಸಂಯಮ ಮೊದಲಾದ ಸದ್ಗುಣಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಮಕ್ಕಳು ಬುದ್ಧಿ ತಿಳಿಯುವುದರೊಳಗಾಗಿ ಸಮಯಪ್ರಜ್ಞೆ, ಶುದ್ಧ ಸಂಭಾಷಣೆ, ಏಕಾಗ್ರತೆ, ವಿಷಯ ಪರಿಜ್ಞಾನ, ಹೃದಯ ವೈಶಾಲ್ಯತೆ ಇವನ್ನು ಪಡೆಯುವಂತೆ ತಂದೆತಾಯಿಗಳು ಗಮನ ಹರಿಸಬೇಕು.

— ಸಿ.ಆರ್. ರಂಗಮ್ಮ, ಚನ್ನರಾಯಪಟ್ಟಣ

*ಮನೆ ಅಥವಾ ಕುಟುಂಬ—ಇದು ಹೃದಯ ವಿಸ್ತಾರದಲ್ಲಿ ಮೊದಲನೆಯ ಮೆಟ್ಟಿಲು. 'ಅಹಂ' (ನಾನು) ಎಂಬುದು ಕರಗಿ 'ಮಮ'ತೆ (ನನ್ನದು) ಎಂಬ ರೂಪದಲ್ಲಿ ತಾಯಿ, ತಂದೆ, ಹೆಂಡತಿ, ಮಕ್ಕಳು, ಬಂಧು, ಬಳಗ, ಇಷ್ಟರು, ಮಿತ್ರರು—ಎಂಬ ಇತರರನ್ನು ತನ್ನೊಳಕ್ಕೆ ಸೇರಿಸಿಕೊಳ್ಳುತ್ತದೆ.—ಡಿ.ವಿ.ಜಿ.*

**ಮ**ಕ್ಕಳನ್ನು ಮುಖ್ಯವಾಗಿ ಹೆತ್ತ ತಂದೆತಾಯಿ ಐದು ವರ್ಷಗಳ ತನಕ ದೇವರಂತೆ, ಲಾಲಿಸಿ, ಪಾಲಿಸಿ ತಮ್ಮ ಸಮಸ್ತವನ್ನೂ ಧಾರೆ ಎರೆದು ಕಣ್ಣಲ್ಲಿ ಕಣ್ಣಿಟ್ಟು ಸಾಕಿ ಸಲಹಬೇಕು. ಮಕ್ಕಳಿಗೆ ತಿಳುವಳಿಕೆ ಬರಲು ಪ್ರಾರಂಭಿಸುವಾಗ ಹಂತ ಹಂತವಾಗಿ ಒಳ್ಳೆಯ ವಿಷಯಗಳ ಬಗ್ಗೆ ನಿಧಾನವಾಗಿ ತಿಳಿಹೇಳುವ ಸಹನೆ ತಂದುಕೊಳ್ಳಬೇಕು. ಅವರ ಬೌದ್ಧಿಕ ಮಾನಸಿಕ ದೈಹಿಕ ಬೆಳವಣಿಗೆಗಳ ಕಡೆ ಪೂರ್ಣ ಗಮನ ಹರಿಸಬೇಕು. ಮಕ್ಕಳನ್ನು ಸತ್ಯಸಂಧ, ಪ್ರಾಮಾಣಿಕ, ನಿಷ್ಠಾವಂತ ನಿಃಸ್ವಾರ್ಥಿಗಳನ್ನಾಗಿ ರೂಪಿಸಲು ತಂದೆ ತಾಯಿಗಳು ಪ್ರಯತ್ನಿಸಬೇಕು. ಮಕ್ಕಳನ್ನು ಎಳವೆಯಿಂದಲೇ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸಿ ಅವರು ಸೋಮಾರಿಗಳಾಗದಂತೆ ಅವರಲ್ಲಿ ಸ್ವಂತಿಕೆ ಬರುವಂತೆ ಪ್ರಯತ್ನಿಸಬೇಕು. ಅವರನ್ನು ಪ್ರೀತಿಯಿಂದ ತಿದ್ದಿ ತೀಡಿ ಉತ್ತಮ ಮಗುವನ್ನಾಗಿ ರೂಪಿಸುವುದು ಮಾತ್ರವಲ್ಲದೆ ಸಮಾಜದಲ್ಲಿಯೂ ಎಲ್ಲರೊಡನೆ ಹೊಂದಿಕೊಂಡು ಬಾಳುವ ವಿಧಾನವನ್ನು ಕಲಿಸುವುದು ತಂದೆ ತಾಯಿಗಳ ಗುರುತರ ಜವಾಬ್ದಾರಿ. —ಹೇಮಲತಾ. ವಿ.ಶೆಟ್ಟಿ, ಉಡುಪಿ

**ಯಾ**ವ ಡಿಗ್ರಿಯೂ ಇಲ್ಲದೆ, ಯಾವ ಪ್ರಮಾಣಪತ್ರವೂ ಇಲ್ಲದೆ, ಯಾವ ತರಬೇತಿಯೂ ಇಲ್ಲದೆ, ಯಾರ ಪರವಾನಗಿ ಇಲ್ಲದೆಯೇ ತಂದೆತಾಯಿಗಳಾಗಿಬಿಡಬಹುದು. ಅದೊಂದು ಪ್ರಕೃತಿಸಹಜ ಕ್ರಿಯೆ. ಆದರೆ ಒಳ್ಳೆಯ ತಂದೆತಾಯಿಗಳಾಗುವುದು ಮತ್ತು ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವುದು ಬಹಳ ಜವಾಬ್ದಾರಿಯ ಕೆಲಸ. ಕುಟುಂಬಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದರಿಂದ ಮತ್ತು ಪತಿ, ಪತ್ನಿ ತೆರೆದ ಹೃದಯದಿಂದ ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ಹಲವಾರು ವಿಷಯಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಮಗುವೂ ವಿಶಿಷ್ಟವಾದದ್ದು. ತನ್ನದೇ ಆದ ದೇಹ, ಮನಸ್ಸು, ಬುದ್ಧಿಗಳನ್ನು ಹೊಂದಿರುತ್ತದೆ. ಎಲ್ಲ ಮಕ್ಕಳ ವಿಷಯದಲ್ಲಿಯೂ ಒಂದೇ ರೀತಿಯ ನೀತಿಗಳನ್ನು ಅನುಸರಿಸಲು ಸಾಧ್ಯವಿಲ್ಲ.

ಹಿಂದಿನ ಕಾಲದ ಅವಿಭಕ್ತ ಕುಟುಂಬಗಳಲ್ಲಿ ಅಜ್ಜಿ, ತಾತ, ಚಿಕ್ಕಪ್ಪ, ದೊಡ್ಡಪ್ಪ, ಅತ್ತಿಗೆ, ನಾದಿನಿ ಹೀಗೆ ಹಲವಾರು ಅನುಭವಸ್ಥರಿರುತ್ತಿದ್ದರು. ಮನೆಯ ಸಂಸ್ಕೃತಿ, ನಡವಳಿಕೆಗಳು ಮಗುವಿಗೆ ತಾನಾಗಿಯೇ ಬಂದುಬಿಡುತ್ತಿದ್ದವು. ಎಲ್ಲ ರೀತಿಯ ಜನರ ಒಡನಾಟದಿಂದ ಮಗು ಸಹಜವಾಗಿ ಸಮಾಜಜೀವಿಯಾಗುತ್ತಿತ್ತು. ಈಗ ಗಂಡ-ಹೆಂಡತಿ ಇಬ್ಬರೇ ಇರುವ ಸಂಸಾರಗಳೇ ಹೆಚ್ಚು. ಇಂತಹ ಕುಟುಂಬಗಳಲ್ಲಿ ತಂದೆತಾಯಿಗಳ ಜವಾಬ್ದಾರಿ ಹಿರಿದಾದುದು. ಹಾಗೆಯೇ ಅವರು ತಮ್ಮ ಮಕ್ಕಳಿಗೆ ಸರಿಹೊಂದುವಂತಹ ವಾತಾವರಣವನ್ನು ಕೊಡಲು ಹೆಚ್ಚಿನ ಸ್ವಾತಂತ್ರ್ಯವೂ ಉಂಟು.

ಮಗುವನ್ನು ಹೀಗೇ ಸಾಕುತ್ತೇವೆ, ನಮ್ಮ ಮಗು ಹೀಗೆ ಮಾಡಬೇಕು, ಇದನ್ನೇ ಕಲಿಯಬೇಕು ಎಂದು ತಂದೆತಾಯಿಗಳು ಮೊದಲೇ ತೀರ್ಮಾನಿಸುವುದು ಸರಿಯಲ್ಲ. ಮಗು ಬೆಳೆಯುತ್ತಾ ಅದರ ಆಸಕ್ತಿ ಮತ್ತು ನಡೆವಳಿಕೆಗಳನ್ನು ಗಮನಿಸಿ, ಅದು ಹೇಗಿದ್ದರೆ ಸರಿ, ಅದನ್ನು ಯಾವ ರೀತಿ ತಿದ್ದಬೇಕು ಎಂಬುದನ್ನು ನಿರ್ಧರಿಸಬೇಕು. ಯುವಕ ಯುವತಿಯರಾಗಿರುವ ತಂದೆತಾಯಿಗಳು ತಮ್ಮ ಈಡೇರದ ಆಸೆಗಳನ್ನು ಮಕ್ಕಳ ಮೂಲಕ ಪಡೆದು

ಕೊಳ್ಳಲು ಪ್ರಯತ್ನಿಸಬಾರದು. ಸೂಕ್ತ ಮಾರ್ಗದರ್ಶನ ನೀಡಿ ಮಕ್ಕಳು ತಮ್ಮ ನಿರ್ಧಾರವನ್ನು ತಾವೇ ತೆಗೆದುಕೊಳ್ಳುವುದಕ್ಕೆ ಪ್ರೇರೇಪಿಸಬೇಕು.

ಮಕ್ಕಳಾದೊಡನೆ ತಂದೆತಾಯಿಗಳು ಎಷ್ಟೋ ಬಾರಿ ತಮ್ಮ ಸ್ವಭಾವಗಳನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಕೆಟ್ಟ ಹವ್ಯಾಸಗಳನ್ನು ಬಿಡಬೇಕಾಗುತ್ತದೆ. ಮಕ್ಕಳಿಗೆ ತಾವೇ ಮಾದರಿಯಾಗಿರಬೇಕಾಗುತ್ತದೆ. ಮಕ್ಕಳ ಜೊತೆ ತಂದೆತಾಯಿಗಳೂ ಬೆಳೆಯಬೇಕು, ಬೆಳವಣಿಗೆಯ ಪ್ರತಿಯೊಂದು ಘಟ್ಟದಲ್ಲೂ ವಿವೇಚನೆಯಿಂದ ವರ್ತಿಸಬೇಕು. ಮಕ್ಕಳು ಚಿಕ್ಕವರಿರುವಾಗ ಅವರು ಸ್ಥಿರವಾಗಿರಲು ಒಳ್ಳೆಯ ಬೇರುಗಳನ್ನು ಕೊಡಬೇಕು. ಹಾಗೇ ಅವರು ಬೆಳೆದು ದೊಡ್ಡವರಾದಾಗ ಸ್ವತಂತ್ರವಾಗಿ ಹಾರಲು ಶಕ್ತಿಯುತವಾದ ರೆಕ್ಕೆ, ಪುಕ್ಕಗಳನ್ನು ಕೊಡಬೇಕಾದುದು ತಂದೆತಾಯಿಗಳ ಕರ್ತವ್ಯ.

—*ಗೀತ ರವಿಕುಮಾರ, ಮೈಸೂರು.*

ಇಂದಿನ ದಿನಗಳಲ್ಲಿ ಹೊರಗಿನ ಶಾಲೆ ಕೇವಲ ಒಂದು ಕಾರ್ಖಾನೆ ಇದ್ದ ಹಾಗೆ. ವ್ಯಾವಹಾರಿಕವಾಗಿ ನಡೆಸುವ ಶಾಲೆಗಳಲ್ಲಿ ಹೆಚ್ಚಿನದನ್ನು ನಿರೀಕ್ಷಿಸಲು ಅಸಾಧ್ಯ. ಕಡಿಮೆ ಬಂಡವಾಳ ಹೂಡಿ, ಹೆಚ್ಚು ಲಾಭಗಳಿಸುವ ಉದ್ದೇಶ ಹೊಂದಿರುವ ಇಂದಿನ ಪಾಠಶಾಲೆಗಳಿಂದ ಮತ್ತು ಅವ್ಯವಸ್ಥೆಯ ವಾತಾವರಣದಿಂದ ನಮ್ಮ ಮಕ್ಕಳು ಒಳ್ಳೆ ಸುಸಂಸ್ಕೃತ ಪ್ರಜೆಗಳಾಗುವ, ಮಾನವರಾಗುವ ಬದಲು ಹಣ ಗಳಿಸುವ ಯಂತ್ರಗಳಾಗುತ್ತಿದ್ದಾರೆ. ತಂದೆತಾಯಿಗಳು ಇದನ್ನು ಚೆನ್ನಾಗಿ ಅರಿತು ಮಕ್ಕಳಿಗೆ ತಾವೇ ಮಾರ್ಗದರ್ಶಕರಾಗಿ ಅವರನ್ನು ಒಳ್ಳೆಯ ಪ್ರಜೆಗಳನ್ನಾಗಿಸುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

> **ತಾಯಿಪ್ರೇಮದಿಂದ ವಂಚಿತರಾದ ಮಕ್ಕಳಿಗಿಂತಲೂ ಹೆಚ್ಚಿನ ನಿರ್ಭಾಗ್ಯ ಮಕ್ಕಳು ಇನ್ನಿಲ್ಲ.**
>
> —*ಸುಭಾಷಿತ.*

ತಳಪಾಯ ಸರಿ ಇಲ್ಲದಿದ್ದಾಗ, ಕಟ್ಟಡದ ಗುಣ ಹಾಗೂ ಗಟ್ಟಿತನವನ್ನು ನಿರೀಕ್ಷಿಸಲು ಸಾಧ್ಯವೇ? ಖಂಡಿತ ಇಲ್ಲ. ಹಾಗಾದರೆ ಪರಿಹಾರ? ಇದೆ, ಪ್ರಯತ್ನಿಸಿದರೆ ಮಾತ್ರ.

೧. ತಂದೆತಾಯಿಗಳು ಮಕ್ಕಳನ್ನು ಮೊದಲು ಆರೋಗ್ಯದಿಂದ, ಸ್ವಚ್ಛತೆಯಿಂದ ಬೆಳೆಸಬೇಕು. ಸಮತೋಲನ ಆಹಾರ ಮಕ್ಕಳ ಬೆಳವಣಿಗೆಗೆ ಪುಷ್ಟಿ ನೀಡುತ್ತದೆ.

೨. ಓದಲು ಎಲ್ಲ ಅಗತ್ಯವಾದ ಸಲಕರಣೆಗಳನ್ನು ಒದಗಿಸುವುದು ಆವಶ್ಯಕ.

೩. ತಂದೆತಾಯಿಗಳೆ ಮಕ್ಕಳಿಗೆ ಮಾರ್ಗದರ್ಶಕರಾಗಿರಬೇಕು. ಮಕ್ಕಳನ್ನು ಬೆಳಗ್ಗೆ ಬೇಗ ಎಬ್ಬಿಸುವುದು, ವ್ಯಾಯಾಮ, ಪ್ರಾರ್ಥನೆ ಮುಂತಾದುವುಗಳನ್ನು ಮಾಡಿಸಿ ಒಂದು ಶಿಸ್ತುಬದ್ಧವಾದ ಜೀವನಶೈಲಿಯನ್ನು ಅವರಲ್ಲಿ ರೂಢಿಸಬೇಕು.

೪. ತಂದೆತಾಯಿಗಳು ಮಕ್ಕಳಿಗೆ ಹಾಗೆ ಮಾಡು, ಹೀಗೆ ಮಾಡು, ಬೆಳಗ್ಗೆ ಬೇಗ ಏಳು, ವ್ಯಾಯಾಮ ಮಾಡು, ಓದು ಎನ್ನುವುದಕ್ಕಿಂತ ಆದಷ್ಟು ಅವರ ಚಟುವಟಿಕೆಗಳಲ್ಲಿ ಬೆರೆಯಬೇಕು.

೫. ಶಾಲೆಯಿಂದ ಬಂದ ಮಕ್ಕಳನ್ನು ಶಾಲೆಯಲ್ಲಿ ಏನು ನಡೆಯಿತು ಎಂಬುದನ್ನು ಪ್ರತಿದಿನವೂ ವಿಚಾರಿಸಬೇಕು. ಮಕ್ಕಳಿಗೆ ಸ್ವಂತ ಓದುವ, ಬರೆಯುವ, ಅರ್ಥಮಾಡಿಕೊಳ್ಳುವ ಪ್ರಜ್ಞೆ ಬರುವವರೆಗೆ ಅವರ ಜೊತೆ ದಿನವೂ ೨-೩ ಗಂಟೆಗಳ ಕಾಲ ಕುಳಿತು ಅವರ ಅಭ್ಯಾಸದಲ್ಲಿ ಭಾಗಿಗಳಾಗಬೇಕು.

೬. ಮಕ್ಕಳು ಕೇಳುವ ಎಲ್ಲ ಪ್ರಶ್ನೆಗಳಲ್ಲಿ ಆಸಕ್ತಿ ತೋರಿಸಬೇಕು. ಗೊತ್ತಿರದಿದ್ದಲ್ಲಿ ತಿಳಿದು ಉತ್ತರಿಸುವುದು ಒಳ್ಳೆಯದು. ಮಕ್ಕಳ ಪ್ರಾಶ್ನಿಕ ಮನೋವೃತ್ತಿಯನ್ನು ಯಾವಾಗಲೂ ಹುರಿದುಂಬಿಸಬೇಕು, ಹೀಯಾಳಿಸಬಾರದು.

೭. ತಂದೆತಾಯಿಗಳು ಒಳ್ಳೆ ಅಭ್ಯಾಸಗಳನ್ನು ರೂಢಿಸಿಕೊಂಡಿರಬೇಕು. ಯಾವುದೇ ಕೆಟ್ಟ ಅಭ್ಯಾಸಗಳನ್ನು ಮಕ್ಕಳ ಎದುರಿಗೆ ಮಾಡಬಾರದು. ಉದಾ: ಮದ್ಯಪಾನ ಮಾಡುವುದು, ಸಿಗರೇಟ್ ಸೇದುವುದು ಇತ್ಯಾದಿ.

೮. ಮಕ್ಕಳ ಜೊತೆ ಊಟ ತಿಂಡಿ ಮಾಡುವುದು, ಅವರ ಜೊತೆ ಮಕ್ಕಳಾಗಿ, ಸ್ನೇಹಿತರಾಗಿ, ಮಾರ್ಗದರ್ಶಕರಾಗಿ, ಗುರುಗಳಾಗಿ, ಸಮಯಕ್ಕೆ ಸರಿಯಾಗಿ ವರ್ತಿಸುವುದು ಆವಶ್ಯಕ.

೯. ಕೇಬಲ್ ಟಿ.ವಿ. ತೆಗೆಸಿಹಾಕುವುದು, ಟಿ.ವಿ ಎದುರಿಗೆ ಊಟ, ತಿಂಡಿ ಮಾಡದಿರುವುದು —ಇದು ತಂದೆತಾಯಿಗಳು ಮಾಡುವ ಮೊದಲ ತ್ಯಾಗವಾಗಬೇಕು.

೧೦. ಮಕ್ಕಳ ಮೇಲೆ ಅತಿಯಾದ ವ್ಯಾಮೋಹ ಇರಬಾರದು. ಹಣವನ್ನು ಮಿತವಾಗಿ ಖರ್ಚು ಮಾಡಬೇಕು. ಮಕ್ಕಳು ಕೇಳಿದ್ದನ್ನೆಲ್ಲ ಕೊಡಿಸುವ ರೂಢಿಯನ್ನು ಬೆಳೆಸಬಾರದು. ಅವಶ್ಯ ಮತ್ತು ಅನವಶ್ಯಕದ ಅರಿವನ್ನು ಮೂಡಿಸಬೇಕು.

೧೧. ಮಕ್ಕಳನ್ನು ಆಗಾಗ್ಗೆ ಪ್ರವಾಸಕ್ಕೆ ಕಳುಹಿಸುವುದು, ಅಥವಾ ತಂದೆತಾಯಿಗಳು ಕರೆದೊಯ್ಯುವುದು ಒಳ್ಳೆಯದು.

—*ಯು. ಎಸ್. ಪರಮೇಶ್ವರ, ಕುವಲಿ, ಹಾಸನ ಜಿಲ್ಲೆ.*

"ಮಕ್ಕಳು ದೇವರ ಸಮಾನ"ವೆಂದು ಹೇಳುವ ತಂದೆತಾಯಿಗಳು ಮಕ್ಕಳನ್ನು ದೇವರಂತೆ ಮನದಿಂದ ಪೂಜಿಸಿ, ಭಾವದಿಂದ ಭಾವಿಸಬೇಕು. ಮಕ್ಕಳು ಮೊದಲಿಗೆ ತಂದೆತಾಯಿಗಳ ಪ್ರೀತಿಯಿಂದ ವಂಚಿತರಾಗಬಾರದು. ಹೇಗೆ ಸಾಧಕ ಭಕ್ತನು ತನ್ನ ಕೆಲಸದಲ್ಲಿ ಮಗ್ನನಾಗಿದ್ದು ಮನಸ್ಸನ್ನು ಭಗವಂತನಲ್ಲಿಟ್ಟಿರುತ್ತಾನೋ ಹಾಗೆ ನಾವು ಎಲ್ಲೇ ಇರಲಿ ಹೇಗೇ ಇರಲಿ ಮನಸ್ಸನ್ನು ಮಕ್ಕಳ ಕಡೆ ಇಟ್ಟಿರಬೇಕು. ನಾನು ಕಂಡಿರುವ ಹಾಗೆ ಬೈಕ್ ಹಾಗೂ ಕಾರುಗಳಲ್ಲಿ ಓಡಾಡುವಾಗ ನಾಯಿಮರಿಗಳನ್ನು ಮೈದಡವಿ ಮುದ್ದಿಸುತ್ತಾರೆ. ಅದೇ ಪ್ರೀತಿ ಮಕ್ಕಳ ಕಡೆ ಇದ್ದರೆ ಒಳಿತಲ್ಲವೆ? ತಂದೆತಾಯಿಗಳು ನಮ್ಮ ಮಗು ಯಾವ ಪರಿಸರದಲ್ಲಿ ಬೆಳೆಯಬೇಕು,

ಹಾಗೂ ನಾವು ಯಾವ ಪರಿಸರದಲ್ಲಿದ್ದೇವೆ, ನಮ್ಮ ನಡೆನುಡಿಗಳು ನಮ್ಮ ಮಕ್ಕಳ ಮನಸ್ಸಿನ ಮೇಲೆ ಹೇಗೆ ಪರಿಣಾಮ ಬೀರುತ್ತಿವೆ ಎಂದು ಗಮನಿಸಬೇಕು.

ಮಕ್ಕಳ ಮನದ ಅಭಿರುಚಿಗಳನ್ನು ತಿಳಿದುಕೊಂಡು ಹವ್ಯಾಸಗಳನ್ನು ಅರಿತು ಅವರವರ ಶಕ್ತಿ-ಸಾಮರ್ಥ್ಯಕ್ಕೆ ತಕ್ಕಂತೆ ಈಡೇರಿಸಿ, ಪೂರೈಸಿ ಮುನ್ನಡೆಯಲು ಪ್ರೋತ್ಸಾಹಿಸಬೇಕು. ರಾಮಕೃಷ್ಣ ಪರಮಹಂಸರು ಹೇಳಿದ ಹಾಗೆ "ಸಸಿಯ ಸುತ್ತ ಬೇಲಿ ಕಟ್ಟಬೇಕು. ಇಲ್ಲವಿದ್ದರೆ ದನಗಳು ಮೇಯುತ್ತವೆ. ಅದು ಬೆಳೆದು ದೊಡ್ಡದಾದ ನಂತರ ಬೇಲಿಯ ಅವಶ್ಯಕತೆಯಿರುವುದಿಲ್ಲ." ಹಾಗೆಯೇ ನಮ್ಮ ಪ್ರೀತಿಯ ಬೇಲಿಯಿಂದ ಮಕ್ಕಳನ್ನು ಕಟ್ಟಿಹಾಕಿದರೆ, ನಮಗೂ ಆನಂದ ಅವರಿಗೂ ಆನಂದ. ಮಕ್ಕಳಿಗೆ ಓದು ಎಷ್ಟು ಮುಖ್ಯವೋ, ಶಿಸ್ತು ಅಷ್ಟೇ ಮುಖ್ಯವಾದುದು. ಅತಿಯಾಗಲ್ಲ, ಮಿತವಾಗಿ. ಮಕ್ಕಳು ಎಲ್ಲೆಲ್ಲಿ ಹೇಗೆ ಇರಬೇಕು, ಅವರ ನಡೆನುಡಿಗಳು ಹೇಗಿರಬೇಕು ಎನ್ನುವುದನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ ಹಿರಿದಾಗಿದೆ. ಶಾಲೆಗೆ ಹೋದ ಮಕ್ಕಳು ನನ್ನ ತಾಯಿಯನ್ನು ಯಾವಾಗ ನೋಡುತ್ತೇನೋ ಎನ್ನುವ ತವಕದಲ್ಲಿರುವಂತೆ ಬೆಳೆಸಿರಬೇಕು. ಶಾಲೆಯಿಂದ ಬಂದ ಮಕ್ಕಳು ಮಾನಸಿಕವಾಗಿ, ದೈಹಿಕವಾಗಿ ಹಿಂಸೆಯಿಲ್ಲದೆ ಶುಭ್ರವಾತಾವರಣದಲ್ಲಿದ್ದರೆ ಆಕಾಶದಲ್ಲಿ ತಂಪಾದ ಚಂದಿರನಂತಿರುತ್ತಾರೆ. ಮಕ್ಕಳಿಗೆ ಮುದ ಕೊಡುವಂತಹ ವಾತಾವರಣ ನಿರ್ಮಾಣವಾದಾಗ ಮಾತ್ರ ಮಕ್ಕಳ ಜೀವನ ಚೆನ್ನಾಗಿ ರೂಪುಗೊಳ್ಳುತ್ತದೆ.

— ಆರ್. ಸತ್ಯನಾರಾಯಣ, ತಿಪಟೂರು.

**ಮನೆಯ ಪ್ರೀತಿಯೇ ದೇಶಪ್ರೇಮದ ಮೂಲ.**

—ಚಾರ್ಲ್ಸ್ ಡಿಕನ್ಸ್

೫-೬ ವರ್ಷಗಳ ತನಕ ಮಗು ತನ್ನ ತಂದೆತಾಯಿಗಳ ಪ್ರೀತಿ, ಮಮತೆ ಹಂಚಿಕೊಂಡು ದಷ್ಟಪುಷ್ಟವಾಗಿ ಬೆಳೆಯುವ ವಯಸ್ಸು. ಈ ಅವಧಿಯಲ್ಲಿ ಚೆನ್ನಾಗಿ ತಿಂದುಂಡು ಹಾಯಾಗಿ ಮಲಗಿ ಹಾಡಿ ಕುಪ್ಪಳಿಸುವ ವಯಸ್ಸಿನಲ್ಲಿಯೇ ನಾವು ಮಕ್ಕಳನ್ನು ಬೇಬಿ ಕೇರ್, ಎಲ್.ಕೆ.ಜಿ.- ಯು.ಕೆ.ಜಿ. ಎಂದು ಶಾಲೆಗೆ ಅಟ್ಟುತ್ತೇವೆ. ಅಷ್ಟೇ ಅಲ್ಲದೆ ಹೊರಲಾರದಷ್ಟು ಮಣಭಾರದ ಪುಸ್ತಕ ಚೀಲ ಬುತ್ತಿಯ ಹೊರೆ ಹೆಗಲಿಗೆ ಹೇರುತ್ತೇವೆ. ಇದು ಎಷ್ಟು ಸಮಂಜಸ? ಯಾತಕ್ಕಾಗಿ ಈ ಶಿಕ್ಷೆ ಈ ಎಳೆಯ ಕಂದಮ್ಮಗಳಿಗೆ? ಹಿಂದೆ ಈ ವ್ಯವಸ್ಥೆಗಳಿರಲಿಲ್ಲ. ಗುರುಕುಲ ಮಾದರಿ ಶಾಲೆಗಳಿದ್ದವು. ಇಂದು ಅವು ಅದೃಶ್ಯವಾಗಿ ಗಲ್ಲಿಗಲ್ಲಿಗಳಲ್ಲಿ ನಾಯಿ ಕೊಡೆಗಳಂತೆ ಶಿಶುಶಿಕ್ಷಣ ಸಂಸ್ಥೆಗಳು ಹುಟ್ಟುತ್ತಿವೆ, ಪೆಟ್ಟಿಗೆ ಅಂಗಡಿಗಳಲ್ಲೂ ಈ ತೆರನಾದ ಶಿಕ್ಷಣ ನೀಡುತ್ತಿದ್ದಾರೆ.

ಮಕ್ಕಳನ್ನು ಉತ್ತಮ ಪರಿಸರದಲ್ಲಿ ಬೆಳೆಸಬೇಕು. ಇದು ಅತಿ ಮುಖ್ಯವಾದ ಅಂಶ. ಹಲವಾರು ಯೋಜನೆಗಳ ಮೂಲಕ ನಾವು ನಮ್ಮ ಮಕ್ಕಳ ಜೀವನ ರೂಪಿಸುವುದರಲ್ಲಿ ನಮ್ಮ ಪಾತ್ರ ಅತಿ ಮುಖ್ಯ. —ಮುನಿರಾಜು. ಎ. ಕೋಲಾರ

**ಮ**ಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಗಳ ಪಾತ್ರ ಬಹಳ ಮಹತ್ವವಾದದ್ದು, ಕಾರಣವೆಂದರೆ ನಾವು ಈ ದಿನ ಮಕ್ಕಳನ್ನು ಸರಿಯಾಗಿ ಸಾಕಿ ಸಲಹಿದರೆ ನಮಗೆ ವಯಸ್ಸಾದಾಗ ಅವರು ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಾರೆ. ಅವರು ನಮ್ಮನ್ನು ಸರಿಯಾಗಿ ನೋಡಿಕೊಳ್ಳಬೇಕಾದರೆ ಅವರು ಬಾಲ್ಯಾವಸ್ಥೆ, ಪ್ರೌಢಾವಸ್ಥೆಯಲ್ಲಿರುವಾಗ ಸರಿಯಾದ ರೀತಿಯಲ್ಲಿ ಬೆಳೆಸಿರಬೇಕು. ಸರಿಯಾದ ರೀತಿಯಲ್ಲಿ ಬೆಳೆಸುವುದೆಂದರೆ ಸರಿಯಾದ ಶಿಕ್ಷಣವನ್ನು ಕೊಟ್ಟು, ನೈತಿಕ ತಳಹದಿಯ ಆಧಾರ ದಲ್ಲಿ ತಮ್ಮ ಜೀವನವನ್ನು ಹೇಗೆ ನಿರ್ವಹಿಸಬೇಕೆಂಬ ಅಂಶವನ್ನು ಮಕ್ಕಳಲ್ಲಿ ಮೂಡಿಸುವ ಪ್ರಯತ್ನವನ್ನು ತಂದೆತಾಯಿಗಳು ಮಾಡಬೇಕು.

**ತೊಟ್ಟಿಲು ತೂಗುವ ಕೈ ಜಗತ್ತನ್ನಾಳುತ್ತದೆ.**

—ಲೋಕೋಕ್ತಿ.

ಮಕ್ಕಳ ಸಾಮಾಜಿಕ ಬೌದ್ಧಿಕ ಎಲ್ಲ ರೀತಿಯ ಬೆಳವಣಿಗೆಯ ಕಡೆಗೂ ಗಮನವಿರಬೇಕು. ತಂದೆತಾಯಿಗಳು ಜಾಗ್ರತೆ ವಹಿಸಿ ಮಕ್ಕಳ ವರ್ತನೆಗಳನ್ನು ಗಮನಿಸಿ ಸೂಕ್ತ ಮಾರ್ಗದರ್ಶನ ಕೊಡಬೇಕು. ಇಲ್ಲದಿದ್ದರೆ ಅವರು ಸಮಾಜಕ್ಕೆ ಕಂಟಕರಾಗುತ್ತಾರೆ. ಆಗ ಮೊದಲನೆಯದಾಗಿ ತಂದೆತಾಯಿಗಳಿಗೆ, ಎರಡನೆಯದಾಗಿ ಮನೆತನಕ್ಕೆ, ಮೂರನೆಯದಾಗಿ ಇಡೀ ಊರಿಗೇ ಕೆಟ್ಟ ಹೆಸರು ಬರುತ್ತದೆ. ಮಕ್ಕಳು ಸ್ವಲ್ಪ ಬೆಳೆದ ಮೇಲೆ ಅವರಿಗೆ ತಮ್ಮದೇ ಆದ ಆಕಾಂಕ್ಷೆಗಳು ಇರುತ್ತವೆ. ಆಗ ತಂದೆತಾಯಿಗಳು ಅವರ ಬೇಕು-ಬೇಡಗಳ ಬಗ್ಗೆ ಗಮನ ಹರಿಸಿ, ಅವರಿಗೆ ಒಳಿತು ಕೆಡಕುಗಳ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕು. ತಂದೆತಾಯಿಗಳು ಆಜ್ಞಾಪಿಸುವ ನಿರಂಕುಶತ್ವವನ್ನು ಬಿಟ್ಟು, ಮಾರ್ಗದರ್ಶಕರಾಗಿ ತಮ್ಮ ಕರ್ತವ್ಯ ಮಾಡಬೇಕು. ಮಕ್ಕಳೊಂದಿಗೆ ಉತ್ತಮ ಸ್ನೇಹದಿಂದ ಇರಬೇಕು. —ಎನ್. ಮಲ್ಲೇಶಪ್ಪ, ಹುಲಿಗರಡೀ, ಕೊಪ್ಪ

ಪ್ರಪಂಚದಲ್ಲೆಲ್ಲ ಅತ್ಯಂತ ಉನ್ನತವಾದುದೆಂದರೆ ಮಾತೃಸ್ಥಾನ. ಅತ್ಯಂತ ಮಹತ್ತಾದ ನಿಸ್ವಾರ್ಥದ ಅಭಿವ್ಯಕ್ತಿಯನ್ನು ನಾವು ನೋಡುವುದು ಮತ್ತು ಕಲಿಯುವುದು ಅದೊಂದೇ ಸ್ಥಾನದಲ್ಲಿ. ಮಾತೃವಾತ್ಸಲ್ಯಕ್ಕಿಂತಲೂ ಮೇಲಾದುದು ಭಗವತ್ಪ್ರೇಮವೊಂದೇ. ಇತರ ವಿಧದ ಪ್ರೇಮವೆಲ್ಲ ಅದಕ್ಕಿಂತ ಕೆಳಮಟ್ಟದ್ದು. ತನ್ನ ಮಕ್ಕಳು ಮೊದಲು, ಆಮೇಲೆ ತಾನು. ಈ ತೆರನಾದ ಭಾವನೆಯೇ ತಾಯಿಯ ಕರ್ತವ್ಯ. ಅದನ್ನು ಬಿಟ್ಟು, ತಂದೆ ತಾಯಿಗಳು ತಮ್ಮ ಯೋಗಕ್ಷೇಮವನ್ನೇ ಮೊದಲು ನೋಡಿಕೊಳ್ಳುತ್ತಿದ್ದರೆ, ತಾಯಿತಂದೆಗಳಿಗೂ ಮಕ್ಕಳಿಗೂ ಇರುವ ಸಂಬಂಧ, ಪಕ್ಷಿಗಳಿಗೂ ರೆಕ್ಕೆ ಬಂದ ಮೇಲೆ ತಮ್ಮ ತಾಯಿತಂದೆಗಳನ್ನು ಲೆಕ್ಕಿಸದ ಮರಿಗಳಿಗೂ ಇರುವ ಸಂಬಂಧದಂತೆ ಆಗುತ್ತದೆ.

—ಸ್ವಾಮಿ ವಿವೇಕಾನಂದ